**ಸಾಕ್ಷಿಯನ್ನು ದಿಃ18.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ದ್ವಿತೀಯ ಪಿ.ಯು.ಸಿ ಓದಿದ್ದೇನೆ. ನಾನು ಗೃಹಿಣಿ.
2. ನನ್ನ ತಂದೆ ಹೆಸರು ದೊಡ್ಡೇಗೌಡ. ನನ್ನ ತಂದೆಗೆ 58 ವರ್ಷ ವಯಸ್ಸು. ಅವರು ಈಗೆ ದೊರೆಕೆರೆ ಗ್ರಾಮದಲ್ಲಿದ್ದಾರೆ. ನನ್ನ ತಂದೆ ಕೂಲಿ ಹಾಗೂ ವ್ಯವಸಾಯ ಮಾಡುತ್ತಾರೆ.
3. ನನ್ನ ತಂದೆಗೆ ಅಪಘಾತವಾಗಿ ಆರೋಗ್ಯ ಸರಿ ಇಲ್ಲ.ನನ್ನ ತಂದೆಗೆ ಅಪಘವಾತವಾಗಿ ಒಂದೂವರೆ ವರ್ಷವಾಯಿತು.
4. ಈ ದಾವೆಯನ್ನು ನನ್ನ ತಂದೆ ದಾಖಲು ಮಾಡಿದ್ದರು, ನಾನು ನಡೆಸುತ್ತಿದ್ದೇನೆ.
5. ನನ್ನ ತಾತನ ಹೆಸರು ತಿಮ್ಮೇಗೌಡ. ನನ್ನ ತಾತನ ತಂದೆ ಹೆಸರು ಮಾಳಿ ಕರಿಗೌಡ.

6. ಮಾಳಿ ಕರಿಗೌಡರಿಗೆ ಐದು ಜನ ಗಂಡು ಮಕ್ಕಳು. 3 ಜನ ಹೆಣ್ಣುಮಕ್ಕಳು. ತಿಮ್ಮಾಜಮ್ಮ ಮತ್ತು ಗೌರಮ್ಮ ಗೊತ್ತು. ಇನ್ನೊಬ್ಬ ಹೆಣ್ಣು ಮಗಳ ಅವರ ಹೆಸರು ನನಗೆ ಗೊತ್ತಿಲ್ಲ.

7. ಗಂಡು ಮಕ್ಕಳ ಹೆಸರು ಅಪ್ಪಾಜಿಗೌಡ, ತಿಮ್ಮೇಗೌಡ, ಮರಿಗೌಡ, ಕರಿಗೌಡ ಹಾಗೂ ಕೆಂಪೇಗೌಡ.

8. ನನ್ನ ತಾತನ ಹೆಸರು ತಿಮ್ಮೇಗೌಡ.

9. ನನ್ನ ತಾತನ ಅಣ್ಣ ತಮ್ಮಂದಿರು ಯಾವಾಗ ಹಿಸ್ಸೇ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ.

10. ನನ್ನ ತಾತನಿಗೆ ಮಾದೇಗೌಡ, ಪಾರ್ವತಮ್ಮ ಹಾಗೂ ದೊಡ್ಡೇಗೌಡ ಎಂಬ ಮೂರು ಜನ ಮಕ್ಕಳು. ಈಗ ನನ್ನ ತಾತ ಮೃತರಾಗಿದ್ದಾರೆ. ನನ್ನ ತಾತ 1994 ರಲ್ಲಿ ಮೃತರಾಗಿದ್ದಾರೆ.

11. ನನ್ನ ತಾತ ಬದುಕಿದ್ದಾಗ ನಮ್ಮ ಮನೆಯ ಯಜಮಾನಿಕೆಯನ್ನು ಅವರೇ ಮಾಡುತ್ತಿದ್ದರು. ನಂತರ ನನ್ನ ದೊಡ್ಡಪ್ಪ ಮಾದೇಗೌಡ ಮಾಡುತ್ತಿದ್ದಾರೆ.

12. ಎಲ್ಲಾ ಆಸ್ತಿಗಳ ಖಾತೆ ನನ್ನ ದೊಡ್ಡಪ್ಪ ಮಾದೇಗೌಡರ ಹೆಸರಿನಲ್ಲಿದೆ ಎಂದರೆ ಸರಿ.

13. ಮನೆಯ ಎಲ್ಲಾ ವ್ಯವಹಾರಗಳನ್ನು ನಿಮ್ಮ ದೊಡ್ಡಪ್ಪ ಮಾಡುತ್ತಿದ್ದರು ಎಂದರೆ, ನನ್ನ ತಂದೆ ಬೇರೆ ವಾಸವಿದ್ದರು ಆಸ್ತಿಗಳನ್ನು ಮೌಖಿಕವಾಗಿ ಹಂಚಿಕೊಂಡಿದ್ದರು. ಹಾಗೆ ಹಂಚಿಕೊಂಡು 25-30 ವರ್ಷ ಆಗಿದೆ.

14. ಸದರಿ ಹಂಚಿಕೆಯಲ್ಲಿ ಯಾರ್ಯಾರು ಸೇರಿದ್ದರು ಎಂದರೆ ಕುಟುಂಬದವರು ಹಾಗೂ ಊರಿನ ಮುಖಂಡರು ಸೇರಿದ್ದರು. ಅವರು ಯಾರು ಎಂದರೆ, ಜವರಪ್ಪ. ನಮ್ಮ ಮನೆಯ ಮಾದೇಗೌಡ, ದೊಡ್ಡೇಗೌಡ, ನನ್ನ ತಾತನ ತಮ್ಮ ಮರಿಗೌಡ, ಅಪ್ಪಾಜಿಗೌಡ ರವರು ಸಹ ಸೇರಿದ್ದರು.

15. ಹಂಚಿಕೆ ಮಾಡಿಕೊಂಡಾಗ ನನ್ನ ತಂದೆಗೆ ಸ.ನಂ.121/11 ರಲ್ಲಿ 8 ಗುಂಟೆ, ಸ.ನಂ.121/13 ರಲ್ಲಿ 16 ಗುಂಟೆ. ಸ.ನಂ.121/15 ರಲ್ಲಿ 1 ಎಕರೆ 3 ಗುಂಟೆ ನನ್ನ ದೊಡ್ಡಪ್ಪ ನನ್ನ ತಂದೆಗೆ ವ್ಯವಸಾಯ ಮಾಡಲು ಕೊಟ್ಟಿದ್ದರು. ಸ.ನಂ.127/2 ರಲ್ಲಿ 30 ಗುಂಟೆಯನ್ನು ನೀಡಿದ್ದರು. ಸ.ನಂ.4/23 ರಲ್ಲಿ 2 ಗುಂಟೆ, ಮನೆಯಲ್ಲಿ ಅರ್ಧ ಹಿಸ್ಸೆ ನೀಡಿದ್ದರು.

16. ಹಂಚಿಕೆ ಸಮಯದಲ್ಲಿ ಬರವಣಿಗೆಯನ್ನು ಮಾಡಿದ್ದರಾ ಎಂದರೆ, ಮಾಡಿದ್ದರು.

17. ನನ್ನ ದೊಡ್ಡಪ್ಪನಿಗೆ ಯಾವುದು ಬಂದಿತ್ತು ಎಂದು ನನಗೆ ಗೊತ್ತಿಲ್ಲ.

18. ಸ.ನಂ.121/15 ರಲ್ಲಿ 1 ಎಕರೆ 3 ಗುಂಟೆ ಮಾದೇಗೌಡರಿಗೆ ಕೊಡಲಾಗಿತ್ತು ಎಂದರೆ, ಸರಿಯಲ್ಲ. ನನ್ನ ತಂದೆ ಹಾಗೂ ನಮ್ಮ ಅಜ್ಜಿ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ.

19. ನಮ್ಮ ದೊಡ್ಡಪ್ಪನಿಗೆ ಬಂದಿರುವುದು ಬೇರೆ ಇವೆಯಾ ಎಂದರೆ, ಹೌದು. ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಮಗೆ ಬರಬೇಕಾದನ್ನು ಮಾತ್ರ ಸೇರಿಸಿದ್ದೇವೆ.

20. ನನಗೆ ಈಗ 25 ವರ್ಷ ವಯಸ್ಸು. 4 ನೇ ಪ್ರತಿವಾದಿಗೆ ನನ್ನ ದೊಡ್ಡಪ್ಪ ಯಾವಾಗ ಮಾರಾಟ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಾವು ದಾವೆ ಹಾಕುವ ಕಾಲಕ್ಕೆ ಗೊತ್ತಾಗಿರುತ್ತದೆ.

21. 25 ವರ್ಷದ ಹಿಂದೆಯೇ ನಿಮ್ಮ ತಂದೆ ಹಾಗೂ ದೊಡ್ಡಪ್ಪ ಭಾಗ ಮಾಡಿಕೊಂಡಿದ್ದು, 2001 ರಲ್ಲಿ ನಿಮ್ಮ ದೊಡ್ಡಪ್ಪನ ಹಿಸ್ಸೆಗೆ ಬಂದ ಆಸ್ತಿಯನ್ನು ಸ.ನಂ.121/15 ರಲ್ಲಿ 1 ಎಕರೆ 3 ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

22. ಹಂಚಿಕೆ ಬಗ್ಗೆ ಬರವಣಿಗೆಯಾದ ಪತ್ರ ಮನೆಯಲ್ಲಿ ಇದೆ, ಅದನ್ನು ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ.

23. ನನ್ನ ತಾತ ಮೃತರಾದ ನಂತರ ನನ್ನ ತಂದೆಯ ಮದುವೆಯಾಗಿದೆ. ನನ್ನ ತಾತ ಮೃತರಾದ ನಂತರ ನನ್ನ ತಂದೆ ಹಾಗೂ ದೊಡ್ಡಪ್ಪ ಒಟ್ಟಿಗೆ ಇರಲಿಲ್ಲ. ಆ ಬಗ್ಗೆ ದಾವೆಯಲ್ಲಿ ಬರೆಸಿಲ್ಲ.

24. ನಮ್ಮ ತಾತನ ಅಂತಿಮ ಕಾರ್ಯವನ್ನು ನನ್ನ ತಂದೆ ಹಾಗೂ ದೊಡ್ಡಪ್ಪ ಒಟ್ಟಿಗೆ ಮಾಡಿರುತ್ತಾರೆ.

25. ನನ್ನ ತಂದೆ ಮದುವೆಯಾದ 6 ತಿಂಗಳು ಅಥವಾ ಒಂದು ವರ್ಷ ಒಟ್ಟಿಗೆ ಇದ್ದರು.

26. ನಿಮ್ಮ ತಾತ ಮೃತರಾದಾಗ ಅದರ ಖರ್ಚು ವೆಚ್ಚವನ್ನು ಕುಟುಂಬದ ಯಜಮಾನಿಕೆ ಮಾಡುತ್ತಿದ್ದ ನಿಮ್ಮ ದೊಡ್ಡಪ್ಪ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರು ಯಜಮಾನಿಕೆ ಮಾಡುತ್ತಿರಲಿಲ್ಲ.

27. ನಿಮ್ಮ ದೊಡ್ಡಪ್ಪ ಒಟ್ಟು ಕುಟುಂಬದ ಹಿತಾಸಕ್ತಿಗಾಗಿ ಪಾಲಕ್ಷ ರವರಿಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ